# ಕೆಪಿಎಲ್ 2019ರ ಆವೃತ್ತಿಯ ಮೈಸೂರು ವಾರಿಯರ್ಸ್ ನೂತನ ತಂಡ ಘೋಷಣೆ

**ಮೈಸೂರು, ಜುಲೈ 27, 2019**: ಎನ್.ಆರ್. ಸಮೂಹದ ಒಡೆತನದಲ್ಲಿರುವ ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಕ್ರಿಕೆಟ್ ಫ್ರಾಂಚೈಸ್ ಆಗಿರುವ ಮೈಸೂರು ವಾರಿಯರ್ಸ್, ಕರ್ನಾಟಕ ಪ್ರಿಮಿಯರ್ ಲೀಗ್‌ನ (ಕೆಪಿಎಲ್) ಎಂಟನೆ ಆವೃತ್ತಿಯಲ್ಲಿ ತಂಡವನ್ನು ಪ್ರತಿನಿಧಿಸಲು ಆಟಗಾರರನ್ನು ಆಯ್ಕೆ ಮಾಡಿದೆ. ತಾಜ್ ಹೋಟೆಲ್‌ನಲ್ಲಿ ಇಂದು ಮುಕ್ತಾಯಗೊಂಡ ಹರಾಜು ಪ್ರಕ್ರಿಯೆಯಲ್ಲಿ ಮೈಸೂರು ವಾರಿಯರ್ಸ್ 16 ಆಟಗಾರರನ್ನು ಕೆಪಿಎಲ್‌ನ ಈ ಋತುವಿನಲ್ಲಿ, ಹರಾಜು ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಿದೆ.

**ಹರಾಜು ಪ್ರಕ್ರಿಯೆಯಲ್ಲಿ ಆಯ್ಕೆಯಾದ ಆಟಗಾರರು:**

1. ಅಮಿತ್ ವರ್ಮಾ
2. ಅನಿರುದ್ಧಾ ಜೋಶಿ
3. ಕೆ ವಿ ಸಿದ್ಧಾರ್ಥ್
4. ಕುಶಲ್ ವಾಧ್ವನಿ
5. ವಿನಯ್ ಎನ್ ಸಾಗರ್
6. ಶೋಯೆಬ್ ಮ್ಯಾನೇಜರ್
7. ವೆಂಕಟೇಶ್ ಎಂ
8. ದೇವಯ್ಯ ಕೆ ಎಸ್
9. ಸೌರಭ್ ಯಾದವ್
10. ಮಂಜೇಶ್ ರೆಡ್ಡಿ
11. ಸಂಕಲ್ಪ ಶೆಟ್ಟೆನಾವರ್
12. ಶಿವಕುಮಾರ್ ಬಿ ಯು

13. ರಾಮ್ ಸಾರಿಖ್ ಯಾದವ್

14. ಜಯೇಶ್ ಬಾಬು

15. ಕಿಶನ್ ಬೆಡಾರೆ

16. ದೇಗಾ ನಿಶ್ಚಲ್

**ಉಳಿಸಿಕೊಂಡು ಆಟಗಾರರು:**

1. ವೈಶಾಖ್ ವಿಜಯಕುಮಾರ್
2. ಸುಚಿತ್ ಜೆ

ಮೈಸೂರು ವಾರಿಯರ್ಸ್ ರಾಜ್ಯ ಮತ್ತು ಐಪಿಎಲ್ ಪಂದ್ಯಾವಳಿಯಲ್ಲಿ ಅನುಭವ ಹೊಂದಿರುವ ಉದಯೋನ್ಮುಖ ವೇಗದ ಬೌಲರ್ ವೈಶಾಖ್ ವಿಜಯಕುಮಾರ್ ಮತ್ತು ಮೈಸೂರಿನ ಎಡಗೈ ಮತ್ತು ಎಡಗೈ ಸ್ಪಿನ್ನರ್ ಜೆ. ಸುಚಿತ್ ಅವರನ್ನು ಉಳಿಸಿಕೊಂಡಿದೆ. ಈ ಆಟಗಾರರು ತಂಡವನ್ನು ಸಮರ್ಥವಾಗಿ ಮುನ್ನಡೆಸಲಿದ್ದಾರೆ ಎಂದು ಮೈಸೂರು ವಾರಿಯರ್ಸ್ ಭರವಸೆಯನ್ನು ಹೊಂದಿದೆ.

**ನೂತನ ತಂಡದ ಬಗ್ಗೆ ಮಾತನಾಡಿದ ಸೈಕಲ್ ಪ್ಯೂರ್ ಅಗರಬತ್ತೀಸ್‌ನ ವ್ಯವಸ್ಥಾಪಕ ನಿರ್ದೇಶಕರೂ, ಮೈಸೂರು ವಾರಿಯರ್ಸ್‌ನ ಮಾಲೀಕರೂ ಆದ ಶ್ರೀ ಅರ್ಜುನ್ ರಂಗ,** "ಈ ವರ್ಷದ ಕೆಪಿಎಲ್ ತಂಡವನ್ನು ಪರಿಚಯಿಸಲು ನಮಗೆ ಹೆಮ್ಮೆ ಎನಿಸುತ್ತಿದೆ. ಈ ತಂಡವನ್ನು ನೋಡಿದಾಗ ನಮಗೆ ಈ ವರ್ಷದ ಕೆಪಿಎಲ್ ಪಂದ್ಯಾವಳಿಯ ಬಗ್ಗೆ ಹೆಚ್ಚಿನ ನಿರೀಕ್ಷೆಗಳು ಹುಟ್ಟಿವೆ. ಈ ಅನುಭವಿ ಆಟಗಾರರ ಮಾರ್ಗದರ್ಶನದಲ್ಲಿ ತಂಡದ ತಾಜಾ ಪ್ರತಿಭೆಗಳು ತಮ್ಮ ನಿಜವಾದ ಸಾಮರ್ಥ್ಯವನ್ನು ಹೊರಹಾಕಲಿವೆ. ಹೀಗಾಗಿ ಈ ಬಾರಿಯ ಕೆಪಿಎಲ್ ಪಂದ್ಯವು ಅದ್ಭುತವಾಗಿರುತ್ತದೆ. ಈ ಬಾರಿ ನಮ್ಮ ತಂಡ ಅತ್ಯುತ್ತಮ ಪ್ರದರ್ಶನ ನೀಡಲಿದೆ" ಎಂದರು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (KSCA) ಐಪಿಎಲ್ ಶ್ರೇಣಿಗಳ ಮಾದರಿಯಂತೆ 20–20 ಪಂದ್ಯಾವಳಿಯನ್ನು ಆಯೋಜಿಸಿದ್ದು, 8 ತಂಡಗಳ ನಡುವೆ ಸ್ಪರ್ಧೆ ನಡೆಯಲಿದೆ. 2009ರಲ್ಲಿ ಆರಂಭಗೊಂಡ ಕರ್ನಾಟಕ ಪ್ರೀಮಿಯರ್ ಲೀಗ್ ಈಗ ತನ್ನ 8ನೇ ಆವೃತ್ತಿಯಲ್ಲಿದೆ. ಈ ಆವೃತ್ತಿಯನ್ನು ಆಗಸ್ಟ್ 16, 2019ಕ್ಕೆ ಪ್ರಾರಂಭಿಸಲಾಗುವುದು.

ಕಳೆದ ಕೆಲ ವರ್ಷಗಳಲ್ಲಿ, ತನ್ನ ಪ್ರಮುಖ ಬ್ರಾಂಡ್ ಆಗಿರುವ ಸೈಕಲ್ ಪ್ಯೂರ್ ಅಗರಬತ್ತೀಸ್ ಮೂಲಕ ಎನ್‌ಆರ್ ಸಮೂಹವು ಭಾರತದಲ್ಲಿ ಕ್ರಿಕೆಟ್ ಜೊತೆಗೆ ಸಹಯೋಗ ಹೊಂದಿದ ಪ್ರಮುಖ ಬ್ರಾಂಡ್‌ಗಳಲ್ಲಿ

ಒಂದಾಗಿ ಗುರುತಿಸಿಕೊಂಡಿದೆ. ಅಲ್ಲದೇ, ರೆಡ್ ಅಲರ್ಟ್, ಥರ್ಡ್ ಅಂಪೈರ್ ಬ್ರಾಂಡಿಂಗ್ ಮತ್ತು ಮೈಲ್ ಸ್ಟೋನ್ ಬ್ರಾಂಡಿಂಗ್‌ನಂತಹ ಉತ್ತೇಜಕ ಕ್ರಿಕೆಟ್‌ನ ಬ್ರಾಂಡಿಂಗ್‌ಗಳ ಜೊತೆಗೆ ಪಾಲ್ಗೊಂಡಿದೆ. ಪ್ರತಿ ವರ್ಷ ಹಲವು ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಪ್ರಮುಖ ಪ್ರಾಯೋಜಕರಾಗಿ ಗುರುತಿಸಿಕೊಳ್ಳುವ ಜೊತೆಗೆ, ಸೈಕಲ್ ಪ್ಯೂರ್ ಅಗರಬತ್ತೀಸ್ 2011, 2015 ಮತ್ತು 2017, 2018 ಮತ್ತು 2019ರ ಐಸಿಸಿ ವಿಶ್ವಕಪ್ ಪಂದ್ಯಾವಳಿಯಲ್ಲಿ ವ್ಯಾಪಕವಾಗಿ ಜನಪ್ರಿಯತೆ ಪಡೆದಿರುವ “ಪ್ರೇ ಫಾರ್ ಇಂಡಿಯಾ” (ಭಾರತಕ್ಕಾಗಿ ಪ್ರಾರ್ಥಿಸಿ) ಅಭಿಯಾನವನ್ನು 100 ನಗರಗಳಲ್ಲಿ ನಡೆಸಿದೆ.

## ಮೈಸೂರು ವಾರಿಯರ್ಸ್ ಕುರಿತು

ಮೈಸೂರು ವಾರಿಯರ್ಸ್ ತಂಡ ಕೆಪಿಎಲ್ ಅನ್ನು 2014ರಲ್ಲಿ ಪ್ರವೇಶಿಸಿ ಅದೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿ ಬೆಳೆಯಿತು. 2014ರಲ್ಲಿ ಮೈಸೂರು ವಾರಿಯರ್ಸ್‌ನ ಇಬ್ಬರು ತಾರಾ ಕ್ರಿಕೆಟಿಗರು ಐಪಿಎಲ್ ಪ್ರವೇಶಿಸಿದರು ಮತ್ತು ಈ ಪರಂಪರೆ ಹಾಗೆಯೇ ಮುಂದುವರೆಯಿತು. ಮೈಸೂರು ವಾರಿಯರ್ಸ್‌ನಿಂದ ಆಯ್ಕೆಯಾದ ಬಹಳಷ್ಟು ಆಟಗಾರರು ಭಾರತದ ಕ್ರಿಕೆಟ್ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮೈಸೂರು ವಾರಿಯರ್ಸ್ ತಂಡದ ಗೀತೆಯನ್ನು ಜನಪ್ರಿಯ ಸಂಗೀತ ನಿರ್ದೇಶಕ ಶ್ರೀ ರಘು ದೀಕ್ಷಿತ್ ಸಂಯೋಜಿಸಿ ಹಾಡಿದ್ದಾರೆ. ಕಳೆದ ಸರಣಿಯಲ್ಲಿ ಮೈಸೂರು ವಾರಿಯರ್ಸ್‌ಗೆ ದೊರೆತ ಸದೃಢ ಪ್ರಾಯೋಜಕತ್ವ ತಂಡ ಗಳಿಸಿದ ಮಾನ್ಯತೆಗೆ ಸಾಕ್ಷಿಯಾಗಿದೆ. ಇದು ಒಂದೇ ಬಗೆಯ ಆಲೋಚನೆ ಹೊಂದಿರುವ ಸಮಾನ ಮನಸ್ಕ ಜನರನ್ನು ಒಗ್ಗೂಡಿಸಿ ಅವರನ್ನು ಭಾರತದಲ್ಲಿ ಕ್ರೀಡೆಗೆ ಉತ್ತೇಜಿಸಲು ಶ್ರಮಿಸುತ್ತಿದೆ. ಮೈಸೂರು ವಾರಿಯರ್ಸ್ ಯುವ ಕ್ರಿಕೆಟ್ ಪಟುಗಳಿಗೆ ಟಿ–20 ಮಾದರಿಯಲ್ಲಿ ವೃತ್ತಿಪರ ಕ್ರಿಕೆಟ್‌ನ ಅನುಭವವನ್ನು ನೀಡುವ ಜೊತೆಗೆ ಅವರ ಪ್ರತಿಭೆಯನ್ನು ಬೆಳಕಿಗೆ ತರುವ ಪ್ರಯತ್ನದಲ್ಲಿದೆ.

## ಎನ್‌ಆರ್ ಸಮೂಹದ ಬಗ್ಗೆ

ಮೈಸೂರು ಮೂಲದ ಎನ್‌ಆರ್ ಸಮೂಹ 1948ರಲ್ಲಿ ಶ್ರೀ ಎನ್. ರಂಗರಾವ್ ಅವರಿಂದ ಸ್ಥಾಪಿಸಲ್ಪಟ್ಟಿತು. ಗೃಹ ಕೈಗಾರಿಕೆಯಾಗಿ ಸ್ಥಾಪನೆಯಾದ ಎನ್‌ಆರ್ ಸಮೂಹವು ಇಂದು ಭಾರತ ಮತ್ತು ವಿದೇಶದಲ್ಲಿ ಸ್ಥಾಪಿತ ಉಪಸ್ಥಿತಿಯನ್ನು ಹೊಂದಿರುವ ಒಂದು ಯಶಸ್ವಿಯಾದ ಸಂಘಟಿತ ಉದ್ಯಮ ಸಂಸ್ಥೆಯಾಗಿ ಹೊರಹೊಮ್ಮಿದೆ. ಸಮೂಹ ಇಂದು ವಿವಿಧ ವಹಿವಾಟು ಹೊಂದಿದೆ. ಇದರಲ್ಲಿ ರಿಪ್ಪಲ್ ಫ್ರಾಗ್ರನ್ಸ್ ಅಡಿಯಲ್ಲಿ– ಸುಗಂಧ ದ್ರವ್ಯಗಳು (ಲಿಯಾ ಬ್ರಾಂಡ್‌ನ ರೂಂ ಫ್ರೆಷ್‌ನರ್ಸ್, ಕಾರ್ ಫ್ರೆಷ್‌ನರ್ಸ್) ಹಾಗೂ ಸುವಾಸನೆಯುಕ್ತ ವೆಲ್‌ನೆಸ್ ಹೋಂ ಉತ್ಪನ್ನಗಳು (ಐಆರ್‌ಐಎಸ್), ಫ್ಲೋರಲ್ ಎಕ್ಸ್ಟ್ರಾಕ್ಟ್ಸ್ (ಎನ್‌ಇಎಸ್‌ಎಸ್‌ಒ) ಕೂಡ ಸೇರಿವೆ.

ಸಮೂಹವು ತನ್ನ ಸಾಮಾಜಿಕ ಹೊಣೆಗಾರಿಯನ್ನು ಎನ್‌ಆರ್ ಫೌಂಡೇಷನ್ ಮೂಲಕ ನಿಭಾಯಿಸುತ್ತಿದೆ. ಸುಸ್ಥಿರ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಕಂಪನಿಗೆ ಈಗ ಯುಕೆ ಮೂಲದ ಕಾರ್ಬನ್ ನ್ಯೂಟ್ರಲ್ ಕಂಪೆನಿಯಿಂದ ಕಾರ್ಬನ್ ನ್ಯೂಟ್ರಲ್ ತೈಯಾರಕ ಎನ್ನುವ ಪ್ರಮಾಣೀಕರಣ ದೊರೆತಿದೆ. ಎನ್‌ಆರ್ ಸಮೂಹವ ಇಂದು ಕುಟುಂಬದ ಮೂರನೇ ಪೀಳಿಗೆ ಮುನ್ನಡೆಸುತ್ತಿದೆ. ಎನ್‌ಆರ್ ಸಮೂಹದ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳಲು ಭೇಟಿ ಕೊಡಿ:http://www.nrgroup.co.in/.

ಮಾಧ್ಯಮ ಸಂಪರ್ಕಕ್ಕೆ: **e-mail: umabai.ck@nrrs.net or call Uma Bai |91 7022548894**